## <u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ</u>

ಸಿ.ಸಿ.ನಂ: 1007/2018

**ಚಾಸಾ:( 14 ) ಪ್ರಾಸಾ ( 13 )**

ದಿನಾಂಕ: 27-10-2025 ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಶೃತಿ |
| ಗಂಡ ಹೆಸರು | ಗವಿಸಿದ್ದಪ್ಪ ಹಡಪದ್ |
| ವಯಸ್ಸು | 25 ವರ್ಷ |
| ಉದ್ಯೋಗ | ಮನೆ ಕೆಲಸ |
| ವಾಸಸ್ಥಳ | ಸಂಗಾಪೂರ |

**<u>ಮುಖ್ಯ ವಿಚಾರಣೆ: ಸಸಅ ರವರಿಂದ:</u>**

ನನಗೆ ಚಾಸಾ 1 ನಾದಿನಿಯಾಗಬೇಕು. ಚಾಸಾ 8 ರಿಂದ 13, 15 ರಿಂದ 18 ರವರ ಪರಿಚಯ ನನಗೆ ಇದೆ. ಆರೋಪಿಯನ್ನು ನೋಡಿದ ನೆನಪು ಇರುವುದಿಲ್ಲ. ದಿ: 16-02-2018 ರಂದು ನನ್ನ ಮದುವೆಯಾದ ನಂತರ ಸಂಜೆ 04.00 ವಣಬಳ್ಳಾರಿಯನ್ನು ಬಿಟ್ಟು ಸಂಜೆ 07.00 ಗಂಟೆಗೆ ಹಟ್ಟಿ ಕ್ರಾಸ್ ಹತ್ತಿರ 1/2 ಕೀಮಿಟರ್ ಅಂತರದಲ್ಲಿ ನಾವು 15 ಜನ ಪ್ರಯಾಣಿಸುತ್ತಿದ್ದ ಆಟೋವನ್ನು ಮಹೇಂದ್ರ ಗಾಡಿಯು ಬಂದು ಅಪಘಾತ ಪಡಿಸಿದ್ದು ಇರುತ್ತದೆ. ಸದರಿ ಅಪಘಾತದಲ್ಲಿ ಚಾಸ 9 ರವರಿಗೆ ಎಡ ಭುಜಕ್ಕೆ, ಯಮನಪ್ಪವರಿಗೆ ತಲೆಗೆ ಗಾಯವಾಗಿದ್ದು, ಸುಮಾಂಗಲವರಿಗೆ ಕಾಲಿನ ಚಿಪ್ಪೆಗೆ ಹಾಗೂ ಇನ್ನುಳಿದ ಚಾಸಾ 8, 10 ರಿಂದ 13 ರವರಗೆ ಯಾವ ಭಾಗದಲ್ಲಿ ಗಾಯಗಳು ಆಗಿದ್ದವು ಎಂದು ನನಗೆ ಗೊತ್ತಿಲ್ಲ. ಸದರಿ ಅಪಘಾತದಲ್ಲಿ ಚಾಸಾ 9 ರಿವರಿಗೆ ತೀವ್ರ ಸ್ವರೂಪದ ಗಾಯವಾಗಿದ್ದು, 6 ವರ್ಷದ ಪಾಲಿಕಮ್ಮ ಎಂಬ ಹುಡುಗಿ ಸ್ಥಳದಲ್ಲಿ ಮರಣ ಹೊಂದಿರುತ್ತದೆ. ಸದರಿ ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಅಪಘಾತ ಹಿಂದೆಯಿಂದ ಬರುತ್ತಿದ್ದ ಮಹೇಂದ್ರ ಗಾಡಿಯಿಂದ ಆಗಿರುತ್ತದೆ. ಸದರಿ ವಾಹನವನ್ನು ಅತೀವೇಗವನ್ನು ಚಾಲಯಿಸಿಕೊಂಡು ಬಂದಿರುತ್ತಾನೆ. ಅಪಘಾತ ಪಡಿಸಿದ ವಾಹನದ ಚಾಲಕನನ್ನು ನಾನು ನೋಡಿರುವುದಿಲ್ಲ. ಸದರಿ ಅಪಘಾತದ ಬಗ್ಗೆ ನಾನು ಆಸ್ಪತ್ರೆಯಲ್ಲಿ ಹೇಳಿಕೆಯನ್ನು ದಿ: 17-02-2018 ರಂದು ನೀಡಿರುತ್ತೇನೆ. 4 ದಿನಗಳು ಕಳೆದ ನಂತರ ಪೋಲಿಸ್ ಠಾಣೆಯಲ್ಲಿ ನನ್ನ ಪುರವಣಿ ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿದಾರ ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಅಂತ ಹಿಸಸಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು, ಪಾಟೀಸವಾಲಿಗೆ ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲು: ಸಸಅ ರವರಿಂದ:</u>**

ಅಪಘಾತ ಪಡಿಸಿದ ಮಹೇಂದ್ರ ವಾಹನದ ನೊಂದಣಿ ಸಂಖ್ಯೆ ಕೆಎ 37 ಎ 8222 ಆಗಿತ್ತು ಎಂದರೆ ಅದು ನನಗೆ ಗೊತ್ತಿರುವುದಿಲ್ಲ. ಅಪಘಾತವಾದ ನಂತರ ನ್ಯಾಯಾಲಯದಲ್ಲಿ ಇರುವ ಆರೋಪಿ ಸ್ಥಳದಲ್ಲಿ ವಾಹನವನ್ನು ಬಿಟ್ಟು ಓಡಿ ಹೋಗಿರುತ್ತಾನೆ ಎಂದರೆ ನನಗೆ ನೆನಪು ಇರುವುದಿಲ ಅಪಘಾತ ಪಡಿಸಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇದ್ದಾರೆ ಎಂದರೆ ನನಗೆ ನೆನಪು ಇರುವುದಿಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ**

ನಾವು ಪ್ರಯಾಣಿಸುತ್ತಿದ್ದ ವಾಹನದ ಚಾಲಕನನ್ನು ಸೇರಿ ಮೂರು ಜನ ಚಾಲಕನ ಸಿಟ್ ನಲ್ಲಿ ಕುಳಿತ್ತಿದ್ದರು. ಅಪಘಾತದ ಸ್ಥಳದಲ್ಲಿ ಪೂರ್ವ ಬಾಗದಿಂದಪಶ್ಚಿಮ ಭಾಗಕ್ಕೆ ಪೈಪ್ ಹಾಕಲಾಗಿತ್ತು ಎಂದರೆ ಅದು ನನಗೆ ಗೊಗತ್ತಿರುವುದಿಲ ಸದರಿ ಪೈಪ್ ಹಾಕಲು ರೋಡ್ ನ್ನು ತೆಗ್ಗುಗೊಳಿಸಲಾಗಿತ್ತು ಎಂದರೆ ನನಗೆ ಗೊತಿತಲ್ಲ. ಅಪಘಾತ ರಾತ್ರಿಯ ಸಮಯದಲ್ಲಿ ಅಗಿದ್ದು ಯಾವ ರೀತಿ ಅಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಸಾಕ್ಷ್ಯನ್ನು ನನಗೆ ಗೊತ್ತಿರುವಷ್ಟು ನಾನು ನುಡಿದಿರುತ್ತೇನೆ. ನನಗೆ ಯಾರು ಸಾಕ್ಷ್ಯವನ್ನು ನುಡಿಯಲು ಒತ್ತಾಯ ಮಾಡಿರುವುದಿಲ್ಲ ನಾನು ಈ ದಿನ ಸಾಕ್ಷ್ಯ ನುಡಿಯಲು ಪೋಲಿಸರು ಹೇಳಿ ಕೊಟ್ಟಿರತ್ತಾರೆ ಎಂದರೆ ಸರಿಯಲ್ಲ. ಅಪಘಾತವಾದ ಜಾಗದಲ್ಲಿ ಕತ್ತಲು ಇತ್ತು ಅಲ್ಲಿ ಯಾವುದೇ ಲೈಟ್ನ ವ್ಯವಸ್ಥೆ ಇರುವುದಿಲ್ಲ. ಸದರಿ ಅಪಘಾತ ನಾವು ಚಾಲಯಿಸುತ್ತಿದ್ದ ಅಪೆ ವಾಹನದ ತಪ್ಪಿನಿಂದ ಅಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ವಾಹನದ ಚಾಲಕನ ತಪ್ಪಿನಿಂದ ವಾಹನ ಉರಳಿ ಬಿದ್ದು, ಅಪಘಾತವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಒಂದು ಚರಂಡಿಯನ್ನು

ಮರು ವಿಚಾರಣೆ ಇಲ್ಲ.
(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

ಹೆ. ಜೆ ಎಂ ಎಫ್ ಸಿ ಕೊಪ್ಪಳ.